# ಕಿರಾತಕಡ್ಡಿ



■ ಚಿತ್ರ-ಬರಹ:
ಕೃಷ್ಣ ಪ್ರಶಾಂತ್ ವಿ. ಗೇರುಕಟ್ಟೆ



## ಔಷಧೀಯ ಗುಣಗಳು

ಬಿಡದೆ ಕಾಡುವ ಭೀಕರ ಮಲೇರಿಯಾ ಜ್ವರಕ್ಕೆ ಕಿರಾತಕಡ್ಡಿ ರಾಮಬಾಣವಾಗಿದೆ. ಕಿರಾತಕಡ್ಡಿಯ ಎಲೆಗಳನ್ನು ಚೆನ್ನಾಗಿ ಅರೆದು, ತುಳಸಿ ಹಾಗೂ ಅಮೃತಬಳ್ಳಿಯ ರಸದೊಂದಿಗೆ ಬೆರೆಸಿ ಕಷಾಯ ಮಾಡಿ ಸ್ವಲ್ಪ ಸ್ವಲ್ಪವೇ ಸೇವಿಸಿದರೆ ಕೆಲದಿನಗಳಲ್ಲೇ ಮಲೇರಿಯಾ ಶಮನವಾಗುತ್ತದೆ ಎನ್ನುತ್ತದೆ ಆಯುರ್ವೇದ.

- ✔ ಮೈ ಕೈ ನೋವು, ಕಾಡುವ ಗಂಟುನೋವು ಮುಂತಾದ ಸಮಸ್ಯೆಗಳಿಗೆ ಕಿರಾತಕಡ್ಡಿಯ ಬೇರಿನ ರಸವು ಪರಿಣಾಮಕಾರಿಯಾಗಿದೆ.
- ✔ ಮಕ್ಕಳು ಕಿರಾತಕಡ್ಡಿಯ ಎಲೆಯಿಂದ ತಯಾರಿಸಿದ ಕಷಾಯವನ್ನು ಜೇನುತುಪ್ಪ-ದೊಂದಿಗೆ ಸೇವಿಸುವುದರಿಂದ ಕಫದಂತಹ ಸಮಸ್ಯೆಗಳು ನಿವಾರಣೆಯಾಗುತ್ತವೆ.
- ✔ ಕೆಲವು ವರ್ಷಗಳ ಹಿಂದೆ ಚಿಕೂನ್‌ಗುನ್ಯಾ ಎಂಬ ಮಾರಕಜ್ವರ ಎಲ್ಲೆಡೆ ಹರಡಿತ್ತು. ಆ ಸಂದರ್ಭದಲ್ಲಿ ಕಿರಾತಕಡ್ಡಿಯ ಕಸಾಯಕ್ಕೆ ಬೇಡಿಕೆ ಬಹಳಷ್ಟು ಹೆಚ್ಚಾಗಿತ್ತು. ಕಿರಾತಕಡ್ಡಿಯನ್ನು ಬೇರುಸಹಿತ ಕಿತ್ತು ಚೆನ್ನಾಗಿ ಒಣಗಿಸಿ ಮಾರಾಟ ಮಾಡಲಾಗುತ್ತಿತ್ತು. ಈಗಲೂ ವಿವಿಧ ರೀತಿಯ ಔಷಧಗಳ ತಯಾರಿಕೆಗೆ ಇದನ್ನು ಬಳಸಲಾಗುತ್ತದೆ.

ಕಿರಾತಕಡ್ಡಿ. ಹೆಸರು ಕೇಳಲು ವಿಚಿತ್ರವಾಗಿರಬಹುದು. ಆದರೆ ಈ ಸಸ್ಯವು ಅಗಾಧ ಔಷಧೀಯ ಸತ್ವವನ್ನು ಹೊಂದಿದೆ. ಆಂಡ್ರೋಗ್ರಾಫಿಸ್ ಪಾನಿಕ್ಯುಲೇಟಾ ಎಲ್ ಎನ್ನುವುದು ಇದರ ವೈಜ್ಞಾನಿಕ ಹೆಸರು.

ಪೊದರುಗಳಲ್ಲಿ ಬೆಳೆಯುವ ಈ ಸಸ್ಯದ ಎಲೆಗಳು ಕಡುಹಸಿರು ಬಣ್ಣವನ್ನು ಹೊಂದಿದ್ದು ಆಕಾರದಲ್ಲಿ ಮೊನಚಾಗಿರುತ್ತದೆ. ರುಚಿಯಲ್ಲಿ ಬಹಳ ಕಹಿಯಾಗಿದ್ದರೂ ಇದನ್ನು ಔಷಧವಾಗಿ ಬಳಸಿದವರಿಗೆ ಸಿಗುವ ಫಲಿತಾಂಶಗಳು ಬಹಳಷ್ಟು ಸಿಹಿ! ರೋಗನಿರೋಧಕ ಶಕ್ತಿಯನ್ನು ಅಧಿಕ ಪ್ರಮಾಣದಲ್ಲಿ ಹೊಂದಿದೆ.

ಕಿರಾತಕಡ್ಡಿಯು ಪೊದರಿನ ಆಕಾರದಲ್ಲಿ ಬೆಳೆಯುವ ಕಾರಣ ಇದನ್ನು ಮನೆಯಂಗಳದಲ್ಲಿ ಅಲಂಕಾರಕ್ಕಾಗಿಯೂ ಬೆಳೆಸುತ್ತಾರೆ. ಹೂದೋಟದಲ್ಲಿ ಗುಂಪಾಗಿ ಬೆಳೆದ ಕಿರಾತಕಡ್ಡಿಯ ಪೊದರನ್ನು ವಿವಿಧ ಆಕಾರಗಳಲ್ಲಿ ಕತ್ತರಿಸುವುದರಿಂದ ಹೂದೋಟದ ಅಂದ ವೃದ್ಧಿಸುತ್ತದೆ. ●